MYSORE LEGISLATIVE ASSEMBLY

SEVENTY-SEVENTH DAY.

Thursday, 5th December 1963.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Coconut Research Farm at Arsikere.

*Q.—520. Sri P. B. BOMMANNA (Arsikere).—

Will the Government be pleased to state :—

(*a*) when the Arsikere Coconut Research Farm was started and the extent of land sanctioned to this Farm ;

(*b*) the amount spent for clearing the forest and the mode of disposal of trees, etc., together with the amount realised ;

(*c*) the mode of selection of improved varieties of seed coconut ;

(*d*) the basis on which the price of seed coconut is fixed ;

(*e*) the expenditure incurred so far on the above Farm and the income realised over the past three years ?

A.—Sri H. C. BORIAH (Parliamentary Secretary to the Minister for Agriculture).—

(*a*) The Farm was started on 30th June 1958 and 50 acres of land were sanctioned.

(*b*) Rs. 4,569-82 nP. were spent for clearing the forest. The trees were disposed of in public auction and a sum of Rs. 52 was realised.

(*c*) Fully ripe (12 months old) Seed Coconuts were selected from mother palms out of the best coconut growing areas inspected by a Specialist.

(*d*) The basis is 10 per cent higher than the local regulated market rate.

(*e*) The expenditure incurred for the last three years till 1962-63 is Rs. 2,19,698-94 nP. and income realised is Rs. 2,633-53 nP.

ಶ್ರೀ ಪಿ. ಬಿ. ಬೊಮ್ಮಣ್ಣ.—ಇಲ್ಲಿ ಖರ್ಚುಮಾಡಿರತಕ್ಕ ಹಣ ಮತ್ತು ಬಂದಿರತಕ್ಕ ಉತ್ಪತ್ತಿ ಇವೆರಡನ್ನೂ ಹೋಲಸಿ ನೋಡಿದರೆ ಇಲ್ಲೇನೋ ಅನ್ಯಾಯ ಅಥವಾ ಅಚಾತುರ್ಯ ಸಂಭವಿಸಿದೆ ಎಂದು ಗೊತ್ತಾಗುತ್ತದೆಯಲ್ಲವೇ ?

† ಶ್ರೀ ಎಚ್. ಸಿ. ಬೋರಯ್ಯ.—ಆ ರೀತಿ ಅನ್ಯಾಯವಾಗುವುದಕ್ಕೆ ಕಾರಣವಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕಾಡನ್ನು ಕಡಿಯುವುದಕ್ಕೆ ಆದ ಖರ್ಚಿಷ್ಟು ಮತ್ತು ಆ ಮರಗಳನ್ನು ಮಾರಿದ್ದರಿಂದ ಬಂದ ಹಣವೆಷ್ಟು ?

ಶ್ರೀ ಎಚ್. ಸಿ. ಬೋರಯ್ಯ.—ಉತ್ತರದಲ್ಲೇ ತಿಳಿಸಿದ್ದೇವೆ.

ಶ್ರೀ ಪಿ. ಬಿ. ಬೊಮ್ಮಣ್ಣ.—ನಾಲ್ಕು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಕಾಡನ್ನು ಕಡಿದು ಹರಾಜು ಮಾಡಿದ್ದರಲ್ಲಿ ಬಂದ ವರಮಾನ ಕೇವಲ 52 ರೂಪಾಯಿಗಳು ಇಷ್ಟೇನೆ ?

ಶ್ರೀ ಎಚ್. ಸಿ. ಬೋರಯ್ಯ.—ಅಲ್ಲಿ ಮರಗಳೇನೂ ಇರಲಿಲ್ಲ. ಇದ್ದ ಮರಗಳೆಂದರೆ ಈಚಲ ಮರಗಳು, ಇನ್ನು ಬಹುಭಾಗದಲ್ಲಿದ್ದುದೆಲ್ಲ ಕುರುಚಲು ಗಿಡಗಳು.

ಶ್ರೀ ಎಸ್. ಎಂ. ಕೃಷ್ಣ.—ಐವತ್ತೆರಡು ರೂಪಾಯಿಗಳ ಬೆಲೆಬಾಳುವಷ್ಟು ಮರಗಳು ಮಾತ್ರ ಆ ಕಾಡಿನಲ್ಲಿದ್ದವೆಂದು ತಾವು ಅಭಿಪ್ರಾಯಪಡುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಈಚಲು ಮರಗಳು ಏನಾ ಬೇರೆ ಯಾವ ಮರಗಳೂ ಅಲ್ಲಿರಲಿಲ್ಲ. ಬಾಕಿ ಪ್ರದೇಶದಲ್ಲೆಲ್ಲಾ ಕುರುಚಲು ಗಿಡಗಳು ಮಾತ್ರ ಇದ್ದುವು.

ಶ್ರೀ ಜಿ. ದುಗ್ಗಪ್ಪ.—ತೆಂಗಿನ ಗಿಡಗಳ ಸಂಶೋಧನಾ ಕೇಂದ್ರವನ್ನು ಮೈಸೂರು ಸರ್ಕಾರದಿಂದ ನಡೆಸಲಾಗುತ್ತಿದೆಯೇ ಅಥವಾ ಹೇಗೆ ?

ಶ್ರೀ ಎಚ್. ಸಿ. ಬೋರಯ್ಯ.—ಇದನ್ನು ಮೈಸೂರು ಸರ್ಕಾರದವರೇ ನಡೆಸುತ್ತಿದ್ದಾರೆ. ಇಂಡಿಯಾ ದೇಶದ ಸೆಂಟ್ರಲ್ ಕೋಕೋನಟ್ ರಿಸರ್ಚ್ ಸಮಿತಿಯವರೂ ಇದಕ್ಕೆ ಸೇರಿದ್ದಾರೆ. ಅವರೂ ನಾವೂ ಅರ್ಧ-ಅರ್ಧ ಖರ್ಚನ್ನು ಹಾಕಿಕೊಳ್ಳುತ್ತಿದ್ದೇವೆ.

ಶ್ರೀ ವಿ. ಎಂ. ದೇವ್.—ಅಲ್ಲಿದ್ದ ಮರಗಳ ಸಂಖ್ಯೆ ಎಷ್ಟು ಮತ್ತು ಮಾರಾಟಮಾಡಿದ ಮರಗಳ ಸಂಖ್ಯೆ ಎಷ್ಟು ?

ಶ್ರೀ ಎಚ್. ಸಿ. ಬೋರಯ್ಯ.—ಅಲ್ಲಿದ್ದ ಈಚಲು ಮರಗಳು 53, ಇನ್ನುಳಿದುದೆಲ್ಲಾ ಕುರುಚಲು ಗಿಡಗಳಿದ್ದ ಪ್ರದೇಶ.

ಶ್ರೀ ಜಿ. ರಾಮೇಗೌಡ.—ಕಾಡಿನಲ್ಲಿದ್ದ ಮರಗಳನ್ನು ಅಮಾನಿಯಂದ ಕಡಿಸಿದರೋ ಅಥವಾ ಕಾಂಟ್ರಾಕ್ಟ್ ಮೂಲಕ ಕಡಿಸಿದರೋ ಮತ್ತು ಒಂದಾಳಿಗೆ ಕೂಲಿಯೇನು ಕೊಟ್ಟರು ?

ಶ್ರೀ ಎಚ್. ಸಿ. ಬೋರಯ್ಯ.—ಆ ಮಾಹಿತಿ ಈಗ ನನ್ನಲ್ಲಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಆ 50 ಎಕರೆ ಕಾಡು ಪ್ರದೇಶದಲ್ಲಿದ್ದ ಮರಗಳು ಇಷ್ಟೇನೇ ?

ಶ್ರೀ ಎಚ್. ಸಿ. ಬೋರಯ್ಯ.—ಆಗಲೇ ಇದಕ್ಕೆ ಉತ್ತರ ಹೇಳಿದ್ದೇನೆ.

ಶ್ರೀ ಜಿ. ದುಗ್ಗಪ್ಪ.—ನಾಲ್ಕು ಸಾವಿರ ಚಿಲ್ಲರೆ ಖರ್ಚಾಗಿರುವಾಗ ಉತ್ಪತ್ತಿ ಇಷ್ಟೇನೇ ?

Mr. SPEAKER.—The same question was put in more forceful terms by Sri K. P. Revennasiddappa. The Hon'ble Member was not attentive.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಲ್ಲಿ ಖರ್ಚಾದುದನ್ನೂ, ಬಂದ ಉತ್ಪತ್ತಿಯನ್ನೂ ತಿಳಿಸಲಾಗಿದೆ. ಉಳಿದ ಹಣ ಏನಾಯಿತು ?

ಶ್ರೀ ಎಚ್. ಸಿ. ಬೋರಯ್ಯ.—ಸಿಬ್ಬಂದಿಗಾಗಿ ಖರ್ಚಾಗಿದೆ. ಕಾಡನ್ನು ಸಿದ್ಧಪಡಿಸಿಕೊಳ್ಳುವುದಕ್ಕೆ ಖರ್ಚಾಗಿದೆ. ಅಲ್ಲಿ ರಾಗಿ ಬೇರೆ ಬೆಳೆಯಲಾಗಿದೆ. ಇದರಿಂದಲೂ ವರಮಾನ ಬಂದಿದೆ.

ಶ್ರೀ ಪಿ. ಬಿ. ಬೊಮ್ಮಣ್ಣ.—ಬೀಜದ ತೆಂಗಿನಕಾಯಿಗಳನ್ನು ಯಾವ ಯಾವ ಪ್ರದೇಶದಲ್ಲಿ ಕೊಳ್ಳಲಾಯಿತು ?

ಶ್ರೀ ಎಚ್. ಸಿ. ಬೋರಯ್ಯ.—ಇಂಥಾ ಪ್ರದೇಶದಲ್ಲೇ ಕೊಳ್ಳಲಾಯಿತು ಎಂದು ಹೇಳುವುದಕ್ಕಾಗುವುದಿಲ್ಲ. ಅಂತೂ ಉತ್ತಮವಾದ ಬೀಜದ ಕಾಯಿಗಳು ಯಾವ ಯಾವ ಪ್ರದೇಶದಲ್ಲಿ ದೊರೆಯುತ್ತವೆಯೋ ಅಲ್ಲೆಲ್ಲಾ ಕೊಳ್ಳಲಾಗಿದೆ.

ಶ್ರೀ ಟಿ. ಮಾದೇಗೌಡ.—ಇಲ್ಲಿ ತೆಂಗಿನ ಬೆಳೆಯ ಬಗ್ಗೆ ಏನಾ ರಿಸರ್ಚ್ ಮಾಡುತ್ತೀರಿ ?

---

†Indicates that the remarks or speeches have not been revised by the member concerned.

ಶ್ರೀ ಎಚ್. ಸಿ. ಬೋರಯ್ಯ.—ತೆಂಗಿನ ಬೀಜವನ್ನು ಅರಿಸಿ ಅವುಗಳನ್ನು ತಲೆಕೆಳಗಾಗಿ ನೆಟ್ಟರೆ ಹೇಗೆ ಬೆಳೆಯುತ್ತವೆ, ಅಡ್ಡಡ್ಡಲಾಗಿ ನೆಟ್ಟರೆ ಹೇಗೆ ಬೆಳೆಯುತ್ತವೆ, ದೂರದೂರವಾಗಿ ನೆಟ್ಟರೆ ಹೇಗೆ ಬೆಳೆಯುತ್ತವೆ, ಗೊಬ್ಬರ ಹಾಕಿ ಬೆಳೆಸಿದರೆ ಹೇಗೆ ಬೆಳೆಯುತ್ತವೆ, ಈ ಸೂತ್ರಗಳನ್ನೆಲ್ಲಾ ಗಮನಿಸಿ ಕೆಲಸ ಮಾಡಲಾಗುತ್ತಿದೆ.

ಶ್ರೀ ಬಿ. ಎಲ್. ಗೌಡ.—ಅಲ್ಲಿಗೆ ಸರಬರಾಯಿ ಆಗತಕ್ಕ ಉತ್ತಮ ಬೀಜದ ಕಾಯಿಗಳನ್ನು ಬೇರೆ ಕಡೆ ಮಾರಾಟವಾಡಿ ಅಲ್ಲಿ ಕಡಮೆ ದರದ ಕಾಯಿಗಳನ್ನು ತಂದು ನೆಡುತ್ತಿದ್ದಾರೆಂದು ತಮಗೇನೂ ದೂರುಗಳು ಬಂದಿಲ್ಲವೇ ?

ಶ್ರೀ ಎಚ್. ಸಿ. ಬೋರಯ್ಯ.—ಇಲ್ಲ.

ಶ್ರೀ ವಿ. ಎಂ. ದೇವ್.—ಮರಗಳನ್ನು ಮಾರಾಟ ಮಾಡಿದ ಬಗ್ಗೆ ಪಬ್ಲಿಕ್ ಆಕ್ಷನ್ ಇಡಲಲ್ಲ ಎಂದು ಸರ್ಕಾರಕ್ಕೇನೂ ದೂರುಗಳು ಬಂದಿಲ್ಲವೇ ?

ಶ್ರೀ ಎಚ್. ಸಿ. ಬೋರಯ್ಯ.—ಇಲ್ಲ.

ಶ್ರೀ ವಿ. ಎಂ. ದೇವ್.—ಈ ಕಾಯಿಗಳನ್ನು ಎಷ್ಟು ಜನ ಕೊಂಡಿದ್ದಾರೆ ?

ಶ್ರೀ ಎಚ್. ಸಿ. ಬೋರಯ್ಯ.—ಇಷ್ಟೇ ಜನ ಕೊಂಡರೆಂದು ಹೇಳಲು ಸಾಧ್ಯವಿಲ್ಲ.

ಶ್ರೀ ಕೆ ಪಿ. ರೇವಣ್ಣಸಿದ್ದಪ್ಪ.—ಈ ಕಾಯಿಗಳನ್ನು ಉದ್ದ, ಅಡ್ಡ ಇಟ್ಟು ಬೆಳೆಯುವುದಕ್ಕೆ ಬದಲು ಅಣಬೆ ರೋಗಕ್ಕೇನಾದರೂ ಇಲ್ಲಿಯ ತನಕ ಚಿಕಿತ್ಸೆಯನ್ನು ಕಂಡು ಹಿಡಿಯಲಾಗಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ರಾಯಬೋರೇಟ್ರಿ ಕಟ್ಟಡಗಳು ಸಿದ್ಧವಾದ ಮೇಲೆ ಅದನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ —ಐವತ್ತು ಎಕರೆ ಪ್ರದೇಶದಲ್ಲೆಲ್ಲ ತೆಂಗಿನ ಸಸಿಗಳನ್ನೇ ಬೆಳೆಯುತ್ತೀರೋ ಅಥವಾ ಬೇರೆ ಬೆಳೆಯನ್ನೇನಾದರೂ ಬೆಳೆಯುತ್ತೀರೋ ?

ಶ್ರೀ ಎಚ್. ಸಿ. ಬೋರಯ್ಯ.—ತೆಂಗಿನ ಸಸಿ, ದನಗಳ ಮೇವು, ಜೋಳ, ಹುರುಳಿ ಇತ್ಯಾದಿ ಅಲ್ಲಿರತಕ್ಕ ನಮ್ಮ ಸಿಬ್ಬಂದಿಗೆ ರಾಗಿ ಇಷ್ಟೆಲ್ಲವನ್ನೂ ಅಲ್ಲಿ ಬೆಳೆಯುತ್ತಾರೆ.

Sri SANJIVANATH AIKALA.—Has it come to the notice of Government that the nursery plants supplied by the Research Centre are not suitable for the coastal district of South Kanara ? Has the Government consequently decided to have a separate research centre in South Kanara ?

Mr. SPEAKER.—This question pertains to Arsikere. Has South Kanara become part of Arsikere ?

Sri G. MADE GOWDA.—What is the qualification of the expert who conducts research in this Farm ?

Mr. SPEAKER.—The Minister said that laboratories have yet to be set-up.

Sri G. NARAYANA GOWDA (Minister for Agriculture).—No research work has yet commenced.

Total extent of lands released for cultivation in Bidare A. M. Kaval in Arsikere Taluk.

*Q.—660. Sri H. R. KESHAVAMURTHY (Gandasi).—

Will the Government be pleased to state :—

(*a*) the total extent of lands released for cultivation in Bidare A. M. Kaval in Arsikere Taluk ?

(*b*) the extent of lands distributed so far ;

(*c*) the extent remaining to be distributed ;

(*d*) the extent earmarked for Gomal purposes ;